ಈ ದಿನ ದಿಃ 06-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್.ಎ.ಬಿ.ವಕೀಲರಿಂದಃ

ನಾನು 10 ನೇ ತರಗತಿಯವರೆಗೆ ಉರ್ದು ಭಾಷೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ. ರೋಶನ್ ಬಿ ರವರ ತಂದೆ ಮೃತ ಪಟ್ಟು 23 ವರ್ಷಗಳಾಗಿರುತ್ತವೆ ಮತ್ತು ಅವರ ತಾಯಿ ಮೃತ ಪಟ್ಟು ಈಗ 2 ವರ್ಷಗಳಾಗಿರುತ್ತವೆ. ರೋಶನ್ ಬಿ ರವರ ತಾಯಿ ಪಟ್ಟಾಗ ಅವರ ವಯಸ್ಸು ಅಂದಾಜು 75 ವರ್ಷ ಇತ್ತು. ವಾದಿಯರು ಪ್ರಸ್ತುತ ದಾವೆಯನ್ನು ಆಸ್ತಿಯ ವಿಚಾರವಾಗಿ ಮಾಡಿರುತ್ತಾರೆ. ಪ್ರಸ್ತುತ ಪ್ರಕರಣದಲ್ಲಿ ವಾದಿಯರು ಬರೆದು ಹಾಕಿರುವ ಸಂಗತಿಗಳನ್ನು ನಾನು ವಕೀಲರಿಂದ ತಿಳಿದುಕೊಂಡಿಲ್ಲ. ದಿಃ 16-11-2013 ರಂದು ಹನಿಫಾ ರವರು ವಾದಿ 1 ಮತ್ತು 2 ರವರ ಹೆಸರಿನಲ್ಲಿ ದಾವಾ ಆಸ್ತಿಯ ಕುರಿತು ಹಿಬಾನಾಮ ಬರೆದುಕೊಟ್ಟಿರುವ ಬಗ್ಗೆ ಮಾಹಿತಿ ಇದೆಯಾ ಎಂದರೆ ಇಲ್ಲ. ಹನಿಫಾ ರವರ ಆಧಾರ ಕಾರ್ಡ ಮತ್ತು ಇತರ ದಾಖಲಾತಿಗಳು ಸದಲಗಾ ಊರಿನವುಗಳಾಗಿದ್ದವು ಎಂದರೆ ಸರಿ. ಹನಿಫಾ ರವರು ಮೃತಪಡುವಾಗ ಅವರ ಆರೋಗ್ಯ ಚೆನ್ನಾಗಿ ಇತ್ತು. ಅವರು ಆಗ ನಡೆಯುತ್ತಿದ್ದರು ಮತ್ತು ಮಾತನಾಡುತ್ತಿದ್ದರು. ಹನಿಫಾ ರವರಿಗೆ ಅವರು ಮೃತ ಪಡುವ ಮೂರು ವರ್ಷಗಳ ಹಿಂದೆ ಪಾರ್ಶ್ವವಾಯು ಆಗಿದ್ದು ಅವರಿಗೆ ಮಾತನಾಡಲು, ನಡೆಯಲು ಬರುತ್ತಿರಲಿಲ್ಲ ಮತ್ತು ಯಾವವುದೇ ಸಂಗತಿಗಳು ಅರ್ಥ ಆಗುತ್ತಿರಲ್ಲಿಲ ಎಂದರೆ ಸರಿ ಅಲ್ಲ.

2. ನಾವು ಪ್ರಸ್ತುತ ಪ್ರಕರಣದ ಪ್ರತಿ ದಿನಾಂಕದಂದು ನ್ಯಾಯಾಲಯದಲ್ಲಿ ಹಾಜರು ಇರುತ್ತೇವೆಂದರೆ ಸರಿ. ಮೃತ್ಯು ಪತ್ರದ ವಿಚಾರ ಹನಿಫಾ ರವರು ಪ್ರಥಮ ಬಾರಿಗೆ ನನಗೆ ಮತ್ತು ನನ್ನ ಸಾಡು ನಬೀರ ರಸುಲ ಗುಣಕೆ ರವರಿಗೆ ಹೇಳಿರುತ್ತಾರೆ. ನಾವು ಮೃತ್ಯು ಪತ್ರ ಬರೆದುಕೊಳ್ಳಲು ವಕೀಲರಾದ ಶ್ರೀ ಪಿ.ಬಿ. ಪಾಟೀಲ ರವರ ಬಳಿ ಹೋಗಿರುತ್ತೇವೆ. ಸದರಿ ವಕೀಲರ ಪರಿಚಯ ಹನಿಫಾ ರವರಿಗೆ ಇತ್ತು ನನಗೆ ಇರಲಿಲ್ಲ. ಹನಿಫಾ ರವರಿಗೆ ಸದರಿ ವಕೀಲರ ಪರಿಚಯ ಹೇಗೆ ಇತ್ತು ಎಂದು ನನಗೆ ಗೊತ್ತಿಲ್ಲ. ಮೃತ್ಯು ಪತ್ರವನ್ನು ದಿಃ 22-07-2022 ರಂದು ಬರೆಯಲಾಗಿದೆ. ಸದರಿ ಮೃತ್ಯು ಪತ್ರವನ್ನು ಮಾಡುವಾಗ ನಾನು ಮತ್ತು ನಬೀರ ರಸುಲ ಗುಣಕೆ ಮಾತ್ರ ಹಾಜರಿದ್ದೆವು. ಮೃತ್ಯು ಪತ್ರವನ್ನು ಕನ್ನಡ ಭಾಷ್ಷೆಯಲ್ಲಿ ಬರೆಯಲಾಗಿದೆ. ಅದು ಕೈಯಿಂದ ಬರೆಯಲಾಗಿದೆಯೇ ಅಥವಾ ಟೈಪ ಮಾಡಿಸಲಾಗಿದೆಯೇ ಎಂದು ನಾನು ಗಮನಿಸಿಲ್ಲ. ಅಲ್ಲಿ ತೆಗೆದುಕೊಂಡ ಹೋಗಿರುವ ದಾಖಲಾತಿಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ನನ್ನ ಅತ್ತೆ ಹನಿಫಾ ರವರಿಗೆ ಮತ್ತು ನನಗೆ ಕನ್ನಡ ಭಾಷೆ ಬರುವುದಿಲ್ಲ ಎಂದರೆ ಹನಿಫಾ ರವರಿಗೆ ಬರುತ್ತಿತ್ತು ನನಗೆ ಬರುವುದಿಲ್ಲ. ಮೃತ್ಯು ಪತ್ರವನ್ನು ಎಷ್ಟು ಮೊತ್ತದ ಛಾಪಾ ಕಾಗದದ ಮೇಲೆ ಬರೆಯಲಾಗಿದೆ ಎಂದು ನಾನು ಗಮನಿಸಿಲ್ಲ. ಮೃತ್ಯು ಪತ್ರದಲ್ಲಿ ಯಾವ ಆಸ್ತಿಯ ಬಗ್ಗೆ ನಮೂದು ಮಾಡಲಾಗಿದೆ ಎಂದು ನಾನ ನೋಡಿಲ್ಲ. ಮೃತ್ಯು ಪತ್ರವನ್ನು ನೋಟರಿ ಮಾಡಿದ್ದಾರಾ ಅಥವಾ ನೋಂದ ಮಾಡಿದ್ದಾರಾ ಎಂದು ನನಗೆ ಗೊತ್ತಿಲ್ಲ.

3. ಮೃತ್ಯು ಪತ್ರ ಮಾಡಿದ ದಿನ ಹನಿಫಾ ರವರಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ಡಾ. ರವರ ಪ್ರಮಾಣ ಪತ್ರದಲ್ಲಿ ಏನು ಬರೆದಿದೆ ಎಂದು ನಾನು ಓದಿ ನೋಡಿಲ್ಲ. ಮೃತ್ಯು ಪತ್ರಕ್ಕೆ ಯಾರದು ಸಮ್ಮತಿ ಸಹಿಯನ್ನು ಪಡೆದಿಲ್ಲ. ಆ ದಿನ ಹನಿಫಾ ರವರದು ಪ್ರಕೃತಿ ಮತ್ತು ಮಾನಸಿಕ ಸ್ಥಿತಿ ಸರಿ ಇರಲಿಲ್ಲ ಎಂದರೆ ಸರಿ ಅಲ್ಲ. ಹನಿಫಾ ರವರಿಗೆ ನಾನು ಏನು ಮಾಡುತ್ತಿದ್ದೇನೆ ಮತ್ತು ಎಲ್ಲಿ ಸಹಿ ಮಾಡುತ್ತಿದ್ದೇನೆಂದು ಅರಿವು ಇರಲಿಲ್ಲ ಎಂದರೆ ಸರಿ ಅಲ್ಲ. ನಾವು ಬೋಗಸ್ ಮೃತ್ಯು ಪತ್ರವನ್ನು ತಯಾರು ಮಾಡಿರುತ್ತೇವೆಂದರೆ ಸರಿ ಅಲ್ಲ.

ಮರು ವಿಚಾರಣೆ ಇಲ್ಲ.

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ,

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಕ್ಕೋಡಿ.